ಬೆಂಗಳೂರು ಮೆಟ್ರೋ ರೈಲ್ವೆ ವ್ಯವಸ್ಥೆ

35(669) ಶ್ರೀ ಚೆಲುವರಾಯಸ್ವಾಮಿ.ಎನ್. (ನಾಗಮಂಡಲ)

ಅ) ಬೆಂಗಳೂರು ಮೆಟ್ರೋ ರೈಲ್ವೆ ಕಾಮಗಾರಿ ಯಾವಾಗ ಪ್ರಾರಂಭವಾಯಿತು; ಮೂಲ ಒಡಂಬಡಿಕೆ ಯೋಜನೆಗಳ ಪ್ರಕಾರ ಯಾವಾಗ ಮುಕ್ತಾಯಗೊಳ್ಳಬೇಕಿತ್ತು; ವಿಳಂಬವಾಗಲು–ಕಾರಣಗಳೇನು; ಪ್ರಸಕ್ತ ಯಾವ ಯಾವ ರೀಚ್ ಕಾಮಗಾರಿಗಳು ಮುಗಿದಿವೆ; ಉಳಿದ ಕಾಮಗಾರಿಗಳು ಯಾವಾಗ ಮುಕ್ತಾಯಗೊಳ್ಳುವ ನಿರೀಕ್ಷೆ ಇದೆ; ಮೂಲ ಯೋಜನೆಗಳನ್ನು ಎಷ್ಟು ಸಲ ಬದಲಾಯಿಸಲಾಗಿದೆ; ಇದಕ್ಕೆ ಕಾರಣಗಳೇನು (ವಿವರ ನೀಡುವುದು)

ಆ) ಮೆಟ್ರೋ ಕಾಮಗಾರಿ ನಡೆಯುತ್ತಿರುವ ರಸ್ತೆಗಳೆಲ್ಲಾ ಗುಂಡಿಬಿದ್ದು, ವಾಹನ ಸಂಚಾರಕ್ಕೆ ತೀವ್ರ ಅಡೆತಡೆಯಾಗಿ ಅಪಘಾತಗಳು ಸಂಭವಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಕಳೆದ ಮೂರು ವರ್ಷಗಳಲ್ಲಿ ಸಂಭವಿಸಿದ ಅಪಘಾತಗಳ ವಿವರ ಒದಗಿಸುವುದು);

ಇ) ಮೆಟ್ರೋ ಕಾಮಗಾರಿ ನಡೆಯುತ್ತಿರುವ ರಸ್ತೆಗಳನ್ನು ರಿಪೇರಿ ಮಾಡಿ ಸುಸ್ಥಿತಿಯಲ್ಲಿಟ್ಟು ವಾಹನ ಸಂಚಾರ / ಜನಸಂಚಾರಕ್ಕೆ ಸುಗುಮಗೊಳಿಸಲಾಗುವುದೇ;

ಈ) ಮೆಟ್ರೋ ರೈಲು ನಿಲ್ದಾಣಗಳ ಬಳಿ ದ್ವಿಚಕ್ರ ವಾಹನಗಳು ಹಾಗೂ ಇತರೆ ವಾಹನಗಳ ನಿಲುಗಡೆಗೆ ಸ್ಥಳಾವಕಾಶ ಕಲ್ಪಿಸಲಾಗಿದೆಯೇ. ಈ ಬಗ್ಗೆ ಭೂಸ್ವಾಧೀನ ಕಾರ್ಯ ನಡೆದಿದೆಯೇ, ಮೆಟ್ರೋ ರೈಲು ನಿಲ್ದಾಣಗಳಿಂದ ಬೆಂಗಳೂರು ಮಹಾನಗರ ಸಾರಿಗೆ ಬಸ್‌ಗಳನ್ನು ಸುತ್ತಮುತ್ತಲ ಬಡಾವಣೆಗಳಿಗೆ ಓಡಿಸಲು ಯೋಜನೆ ರೂಪಿಸಲಾಗಿದೆಯೇ;

ಊ) ಬೆಂಗಳೂರು ಮೆಟ್ರೋ ರೈಲನ್ನು ಮಾಗಡಿ ರಸ್ತೆ ಟೋಲ್‌ಗೇಟ್‌ನಿಂದ ಮಾಗಡಿ ರಸ್ತೆಯ ಸುಂಕದಕಟ್ಟೆವರೆಗೆ ವಿಸ್ತರಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಸಿದ್ದರಾಮಯ್ಯ (ಮಾನ್ಯ ಮುಖ್ಯ ಮಂತ್ರಿಯವರು)

ಅ) ದಿನಾಂಕ: 11.05.2006 ರಂದು ಭಾರತ ಸರ್ಕಾರದಿಂದ ಅನುಮೋದಿತವಾಗಿದ್ದ ಆದೇಶದಂತೆ, ಕಾಮಮಗಾರಿಯನ್ನು 5 ವರ್ಷದೊಳಗೆ ಮುಕ್ತಾಯಗೊಳಿಸಬೇಕಿತ್ತು. ಆದರೆ, 2011ರಲ್ಲಿ ಕಾರ್ಯ ಪ್ರಗತಿಯಲ್ಲಿ ಪರಿಶೀಲಿಸಿ, ಮುಕ್ತಾಯ ದಿನಾಂಕವನ್ನು ಕೇಂದ್ರ ಸರ್ಕಾರವು ಡಿಸೆಂಬರ್ 2013ರವರೆಗೆ ಕಾಲಮಿತಿಯನ್ನು ನೀಡಿತ್ತು.

ಅನುಷ್ಠಾನದಲ್ಲಿನ ವಿಳಂಭಕ್ಕೆ ಕಾರಣಗಳು

- ಭೂಸ್ವಾಧೀನಕ್ಕೆ ಸಂಬಂಧಿಸಿದ ವಿವಾದಗಳು, ಸುದೀರ್ಘವಾದ ನ್ಯಾಯಾಲಯದ ಪ್ರಕರಣಗಳಾಗಿ ಪರಿಣಮಿಸಿದ್ದರಿಂದ ಆದ ವಿಳಂಭ,
- ರೈಲ್ವೆ ಇಲಾಖೆಯಿಂದ ಭೂಮಿ ವರ್ಗಾವಣೆಯಲ್ಲಿ ಸುಮಾರು 2 ವರ್ಷ ವಿಳಂಭ,
- ಸುರಂಗ ಮಾರ್ಗ–1 ಮತ್ತು ಮೆಜೆಸ್ಟಿಕ್ ನಿಲ್ದಾಣ ಇವುಗಳ ಟೆಂಡರ್‌ಗಳ ವಿಭಜನೆ ಮತ್ತು ಮರುಟೆಂಡರ್, ಇವುಗಳಿಂದ ಸುಮಾರು 1 ವರ್ಷಕಾಲ ವಿಳಂಭ
- ಯುಟಿಲಿಟಿಗಳ ಸ್ಥಳಾಂತರಕ್ಕೆ, ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಕಾಲಾವಕಾಶ ಬೇಕಾದ್ದರಿಂದ.

ಬೈಯಪ್ಪನಹಳ್ಳಿಯಿಂದ ಮಹಾತ್ಮಾ ಗಾಂಧಿ ರಸ್ತೆವರೆಗಿನ (6.75 ಕಿ.ಮೀ.) ಉದ್ದದ ರೀಚ್–1 ರಲ್ಲಿ 20.10.2011 ರಿಂದ ಸಾರ್ವಜನಿಕ ಸಂಚಾರಕ್ಕಾಗಿ ಮುಕ್ತಗೊಳಿಸಲಾಗಿದೆ,

ವಿವಿಧ ರೀಚ್‌ಗಳ ಹಂತ–1ರ ಭೌತಿಕ ಪ್ರಗತಿಯ ವಿವರಗಳು ಡಿಸೆಂಬರ್, 2013ರ ಕೊನೆಯಲ್ಲಿದ್ದಂತೆ ಕೆಳಗಿನಂತಿವೆ.

ಕ್ರಮ ಸಂಖ್ಯೆ	ರೀಚ್	ಭೌತಿಕ ಪ್ರಗತಿ ಶೇಖಡಾವಾರು		ಕಾಮಗಾರಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತವಾಗುವ ನಿರೀಕ್ಷಿತ ತಿಂಗಳು
		ವಯಾಡಕ್ಟ್	ನಿಲ್ದಾಣಗಳು	
1	ರೀಚ್–2	100%	77%	ಡಿಸೆಂಬರ್ 2014
2	ರೀಚ್–3	100%	95%	ಫೆಬ್ರುವರಿ 2014
3	ರೀಚ್–3ಎ	100%	95%	ಫೆಬ್ರುವರಿ 2014
4	ರೀಚ್–3ಬಿ	99.79%	66%	ಆಗಸ್ಟ್ 2014
5	ರೀಚ್–4	100%	90%	ಮಾರ್ಚ್ 2015
6	ರೀಚ್–4ಎ	100%	65%	ಮಾರ್ಚ್ 2015
7	ಯುಜಿ–(ಪೂರ್ವ–ಪಶ್ಚಿಮ)	89%		ಡಿಸೆಂಬರ್ 2014
8	ಯುಜಿ–(ಉತ್ತರ–ದಕ್ಷಿಣ)	45%		ಮಾರ್ಚ್ 2015
9	ಮೆಜೆಸ್ಟಿಕ್ ಸ್ಟೇಷನ್(ಯುಜಿ)	41%		ಮಾರ್ಚ್ 2015

ಬೆಂಗಳೂರು ಮೆಟ್ರೋ ಯೋಜನೆಯ ಹಂತ–1ರ ಕಾಮಗಾರಿಗಳು ಮಾರ್ಚ್, 2015ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಮೂಲ ಯೋಜನೆಯನ್ನು ಇದುವರೆಗೂ ಬದಲಾವಣೆ ಮಾಡಿರುವುದಿಲ್ಲ.

ಆ) ಹೌದು

ಮೆಟ್ರೋ ಮಾರ್ಗ ರಸ್ತೆಯ ಮಧ್ಯೆ ಸಾಗುವುದರಿಂದ, ಕಾಮಗಾರಿಯನ್ನು ಅನುಷ್ಠಾನಗೊಳಿಸುವಾಗ ರಸ್ತೆಯನ್ನು ಬಳಸುವ ಪ್ರಯಾಣಿಕರಿಗೆ ಸ್ವಲ್ಪ ತೊಂದರೆಯಾಗುವುದು ಕಾಮಗಾರಿ ಮುಕ್ತಾಯವಾದ ಮೇಲೆ, ಕೆಟ್ಟು ಹೋಗಿರುವ ರಸ್ತೆಗಳನ್ನು ಸಾಮಾನ್ಯ ಸ್ಥಿತಿಗೆ ತರಲಾಗುತ್ತದೆ. ಸಾಮಾನ್ಯವಾಗಿ ಮೇಟ್ರೋ ಕಾಮಗಾರಿ ನಡೆಯುತ್ತಿರುವ ರಸ್ತೆಗಳನ್ನು ಅಗಲೀಕರಣ ಮಾಡಿ ವಾಹನ ಸಂಚಾರವನ್ನು ಸುಗಮಗೊಳಿಸುತ್ತದೆ. ಮುಚ್ಚುವ ಅಗತ್ಯ ಬಂದಾಗ ವಾಹನ ಸಂಚಾರವನ್ನು ಸುಗುಮಗೊಳಿಸಲು ತಾತ್ಕಾಲಿಕ ರಸ್ತೆಗಳನ್ನು ಹೊಸದಾಗಿ ಕೂಡ ನಿರ್ಮಿಸಲಾಗುತ್ತಿದೆ. ಸಂಚಾರ ಮತ್ತಷ್ಟು ಸುಗಮಗೊಳಿಸಲು ಟ್ರಾಫಿಕ್ ವಾರ್ಡನ್‌ಗಳನ್ನು ನೇಮಿಸಲಾಗಿದೆ.

ಸಂಚಾರ ಪೋಲಿಸ್ ಇಲಾಖೆಯ ವರದಿಯಂತೆ ಯಾವುದೇ ಅಪಘಾತಗಳು ಸಂಭವಿಸುವುದಿಲ್ಲ.

ಈ) ಮೆಟ್ರೋ ರೈಲು ಟರ್ಮಿನಲ್ ಸ್ಟೇಶನ್‌ಗಳಲ್ಲಿ ದ್ವಿಚಕ್ರ ಹಾಗೂ ಕಾರುಗಳ ನಿಲುಗಡೆಗೆ ಈಗಾಗಲೇ ಯೋಜಿಸಲಾಗಿದೆ. ಮಧ್ಯಂತರ ನಿಲ್ದಾಣಗಳಲ್ಲಿ ದ್ವಿಚಕ್ರ ವಾಹನಗಳಿಗೆ ಸ್ಥಳಾವಕಾಶ ನೀಡಲು ಯೋಜಿಸಲಾಗಿರುತ್ತದೆ.

ಈಗಾಗಲೇ ಬಿ.ಎಂ.ಟಿ.ಸಿ ಸಂಸ್ಥೆಯು ಮೆಟ್ರೋ ಸಂಪರ್ಕ ಸೇವೆಯನ್ನು ರೀಚ್–1 ರಲ್ಲಿ ಪ್ರಾರಂಭಿಸಿದೆ.

ಉ) ಬೆಂಗಳೂರು ಮೆಟ್ರೋ ರೈಲು ನಿಗಮವು ಹಂತ–3ರ ಪ್ರೀ–ಫೀಸಿಬಿಲಿಟಿ ಸ್ಟಡಿ ಮಾಡುತ್ತಿದ್ದು, ಮಾಗಡಿ ರಸ್ತೆ ಟೋಲ್‌ಗೇಟ್‌ನಿಂದ ಸುಂಕದಕಟ್ಟೆ ವರೆಗಿನ ಮಾರ್ಗವು ಮೂರನೇ ಹಂತದ ಭಾಗವಾಗಿರುತ್ತದೆ.

ಶ್ರೀ ಬಿ.ಎನ್,ವಿಜಯಕುಮಾರ್ :ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ರೀಚ್–3 ಕೆಲಸ ಸ್ವಲ್ಪ ಪ್ರಮಾಣದಲ್ಲಿ ಆಗಿದೆ. ಆದರೆ ಯಾವಾಗ ಇದರ ಸಂಚಾರದ ಕೆಲಸ ಶುರು ಆಗುತ್ತದೆ ಎಂಬುದರ ಬಗ್ಗೆ ಸರಿಯಾದ Idea ಇಲ್ಲ. ರೀಚ್–4 ರಲ್ಲಿ ಕೆಲಸ ಆಗಿ ಸಾಧಾರಣ ಎರಡು ವರ್ಷಗಳೇ ಆಗಿದೆ. ಅಲ್ಲಿ ಸ್ಟೇಷನ್‌ಗಳ ಕೆಳಗಡೆ ರೋಡ್ ಬ್ಯಾರಿಕೇಡ್ ತುಂಬಾ ಹಾಕಿದ್ದಾರೆ. ಅವೆಲ್ಲವನ್ನು ಕ್ಲಿಯರ್ ಮಾಡಿ ಫುಟ್‌ಪಾತ್, ರೋಡ್ medians ಎಲ್ಲವನ್ನು ಮಾಡಿಕೊಟ್ಟರೆ ಅನುಕೂಲವಾಗುತ್ತದೆ. 2015 ಮಾರ್ಚ್‌ಯಲ್ಲಿ ಸಂಚಾರಕ್ಕೆ ಪ್ರಾರಂಭವಾಗುತ್ತದೆ ಎನ್ನುವ ಸಂಭವವಿದೆ ಎಂದು ಉತ್ತರ ಕೊಟ್ಟಿದ್ದಾರೆ. ಅಲ್ಲಿಯವರೆಗೂ ನಮಗೆ ಫುಟ್‌ಪಾತ್ ಮತ್ತು ರೋಡ್‌ನಲ್ಲಿ ಹಾಕಿರುವುದರಿಂದ ತೊಂದರೆಯಾಗುತ್ತದೆ. ಇದನ್ನು ಯಾವಾಗ ಮಾಡಿ ಕೊಡುತ್ತಾರೆಂದು ನನ್ನದೊಂದು ಪ್ರಶ್ನೆ ಇದೆ.

ಶ್ರೀ ಎನ್.ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೇ ಗಮನಿಸುತ್ತಿರುವುದರಿಂದ ಬಹುಶಃ ಈ generation ಗೆ ಮೆಟ್ರೋ ಉಪಯೋಗವಾಗುತ್ತದೆಂದು ನಮಗಂತೂ ನಂಬಿಕೆ ಇಲ್ಲ.

ಅಧ್ಯಕ್ಷರು : ಮಾನ್ಯ, ಚಲುವರಾಯ ಸ್ವಾಮಿಯವರೆ ತಾವು ಪ್ರಶ್ನೆಯ ಬಗ್ಗೆ ಕೇಳಿ,

ಶ್ರೀ ಎನ್.ಚಲುವರಾಯಸ್ವಾಮಿ; ಮಾನ್ಯ ಅಧ್ಯಕ್ಷರೆ, ಇದೊಂದು ಬಹಳ Important ಪ್ರಶ್ನೆ ಇದೆ, ತಾವು ದಯಮಾಡಿ ಮಾತನಾಡುವುದಕ್ಕೆ ಅವಕಾಶ ಕೊಡಿ, ತಮಗೆ ನಾನು ಕೈಮುಗಿಯುತ್ತೇನೆ. ನನ್ನ ಪ್ರಶ್ನೆಯಲ್ಲಿ ಅದೇ ಇದೆ, ಎಲ್ಲೆಲ್ಲಿ ಮೆಟ್ರೋ ಲೈನ್ ಹೋಗಿದೆ ಅದರ ಕೆಳಗಡೆಯಲ್ಲಿ ರಸ್ತೆಯಲ್ಲವೂ ಹಾಳಾಗಿ 2 ರಿಂದ 6 ವರ್ಷಗಳು ಆಗಿದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಬಂದು ತಕ್ಷಣ ಮಾಡಬೇಕೆಂದು ಹೇಳುತ್ತಿಲ್ಲ. ಕಳೆದ Government ನಿಂದಲೂ ಮಾಡಿಕೊಂಡು ಬಂದಿರುವಂತಹ ಇಂತಹ ಅವೈಜ್ಞಾನಿಕವಾದಂತಹ ಇವರು ಮುಂದುವರೆಸುವುದು ಬೇಡವೆಂದು ನನ್ನ

ಅಭಿಪ್ರಾಯವಾಗಿದೆ. ಈಗ ದುಬೈನಲ್ಲಿ ಮತ್ತು ಇಲ್ಲಿ ಎರಡು ಕಡೆಯಲ್ಲಿಯೂ ಈ ಮೆಟ್ರೋ ಕಾಮಗಾರಿಯು ಒಂದೇ ಬಾರಿ ಪ್ರಾರಂಭವಾಯಿತು. ಇಲ್ಲಿ ಕನಿಷ್ಠ ಮೆಟ್ರೋ ಪ್ರಾರಂಭದ ಸ್ಥಿತಿ ಏನೆಂಬುದನ್ನು ಜನರಿಗೆ confusion ಆಗುತ್ತಿದೆ. ಎಲ್ಲಿ ಮೆಟ್ರೋ ಲೈನ್ ಹೋಗಿದೆ ಅಲ್ಲಿ ಯಾವ ರಸ್ತೆಯಲ್ಲಿ ಜನರೂ ಓಡಾಡಲು ಆಗಲಾರದಂತಹ ಪರಿಸ್ಥಿತಿ ಇದೆ. ಮೆಟ್ರೋ ಸ್ಟೇಷನ್ ಏನಿದೆ, ಅಲ್ಲಿ ಯಾವುದು ಪಾರ್ಕಿಂಗ್ ಸಹ ಇರುವುದಿಲ್ಲ. ಪಾರ್ಕಿಂಗ್ ಇಲ್ಲದೆ ಇದ್ದರೆ ಜನರು ಮೆಟ್ರೋ ರೈಲಿನಲ್ಲಿ ಹೇಗೆ ಹೋಗುತ್ತಾರೆ? ಅದರಿಂದ ಇಳಿದು ಬಂದು ಮನೆಗೆ ಹೇಗೆ ಹೋಗುತ್ತಾರೆ? ಬೆಂಗಳೂರಿನ ಬೆಳವಣಿಗೆಗೆ ತಕ್ಕಂತೆ ಬೆಂಗಳೂರಿನ ಮೆಟ್ರೋ ಕಾಮಗಾರಿಯನ್ನು ಮಾಡುತ್ತಿಲ್ಲ. ಇಲ್ಲಿ ರಾಜ್ಯ ಸರ್ಕಾರದ ಮತ್ತು ಕೇಂದ್ರ ಸರ್ಕಾರದ್ದು ಎಂದು ಹೇಳಿ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ.

ಅಧ್ಯಕ್ಷರು: ಇದು ಪ್ರಶ್ನೇನಾ!

ಶ್ರೀ ಎನ್.ಚಲುವರಾಯಸ್ವಾಮಿ : ನಾನು ದಯಮಾಡಿ ಈ ಬಗ್ಗೆ Simple ಆಗಿ ಹೇಳಿಬಿಡುತ್ತೇನೆ, ನಾನು ಮತ್ತೆಮತ್ತೆ ಮರುಪ್ರಶ್ನೆಯನ್ನು ಕೇಳುವುದಿಲ್ಲ. ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಗಮನವನ್ನು ಹರಿಸಿದರೆ ನಿಮಗೆ ಗೌರವ ಸಲ್ಲುತ್ತದೆ. ಇದರಿಂದ ಬೆಂಗಳೂರಿನ ಜನರಿಗೆ ಉಪಯೋಗವಾಗುತ್ತದೆ.

ಅಧ್ಯಕ್ಷರು : ಮಾನ್ಯ ಚೆಲುವರಾಯಸ್ವಾಮಿಯವರೆ, ತಾವು ಪ್ರಶ್ನೆಯನ್ನು ಕೇಳಿ,

ಶ್ರೀ ಎನ್.ಚಲುವರಾಯಸ್ವಾಮಿ : ಮೆಟ್ರೋ ಕಾಮಗಾರಿಯನ್ನು ಯಾವಾಗ ಮುಗಿಸುತ್ತೀರಾ? ಮೆಟ್ರೋ ಬಗ್ಗೆ ಮೊದಲೇ ಸ್ಟೇಜ್ ಮತ್ತು ಎರಡನೇ ಸ್ಟೇಜ್ ಬಗ್ಗೆ detail ಕೊಟ್ಟಿದ್ದೀರಿ. ಈ ಬಗ್ಗೆ ನಿಮ್ಮ ತೀರ್ಮಾನದಂತೆ ಯಾವುದೂ ಸಹ ಆಗುವಂತಹ ವಾತಾವರಣವು ಕಾಣುತ್ತಿಲ್ಲ. ಮೆಟ್ರೋ ಲೈನ್‌ನಲ್ಲಿ ಹೋಗಿರುವಂತಹ ರಸ್ತೆಯನ್ನು ಸಹ ಒಂದು step ಹೋಗುತ್ತಿದ್ದ ಹಾಗೆಯೇ ಕೆಳಗಡೆ ಓಡಾಡುವುದಕ್ಕೆ ಉತ್ತಮವಾದಂತಹ ರಸ್ತೆಯನ್ನು ಮಾಡುವ ಬಗ್ಗೆ ತಾವು direction ಅನ್ನು ಕೊಡಬೇಕು.

ಅಧ್ಯಕ್ಷರು : ಆಯಿತು,

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮೆಟ್ರೋ ಬಗ್ಗೆ ಇಬ್ಬರ ಶಾಸಕರ ಪ್ರಶ್ನೆಯೂ ಒಂದೇ ಆಗಿದೆ. Metro revised estimate ಪ್ರಕಾರ revised time ಎಲ್ಲ ಕೊಟ್ಟ ಮೇಲೆ 2013 ಡಿಸೆಂಬರ್‌ನಲ್ಲಿ ಮುಗಿಯಬೇಕಾಗಿತ್ತು. ಕೆಲವು ತೊಂದರೆ ಬಂದಿದ್ದರಿಂದ ಅದನ್ನು ಮುಗಿಸುವುದಕ್ಕಾಗಲಿಲ್ಲ. ಮಾರ್ಚ್ 2015ಕ್ಕೆ ಮುಗಿಸುತ್ತೇವೆ, ಮಾನ್ಯ ಸದಸ್ಯರಾದ ಶ್ರೀ ಎನ್. ಚಲುವರಾಯಸ್ವಾಮಿಯವರು ಈ ಬಗ್ಗೆ ವಿಶೇಷವಾದ ಗಮನ ಕೊಡಬೇಕೆಂದು ಹೇಳಿದ್ದಾರೆ. ನಾವು ಈ ಬಗ್ಗೆ ವಿಶೇಷವಾದಂತಹ ಗಮನ ಕೊಡುತ್ತಿದ್ದೇವೆ, ಮುಂದೆಯೂ ಸಹ ಕೊಡುತ್ತೇವೆ, ಮೆಟ್ರೋ ಕಾಮಗಾರಿಯನ್ನು ಆದಷ್ಟು ಬೇಗನೆ ಮುಗಿಸುವುದಕ್ಕೆ Phase-1, 42 ಕಿ.ಮೀ ಇದನ್ನು ಮುಗಿಸುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. Phase - II ಮತ್ತೆ ಪ್ರಾರಂಭವಾಗುತ್ತದೆ, ಇದರಲ್ಲಿ ಸುಮಾರು 72 ಕಿ.ಮೀ ಬರುತ್ತದೆ. ನೀವು Phase - III ಬಗ್ಗೆ ಇದರಲ್ಲಿ ಮಾಗಡಿಯಿಂದ ಸುಂಕದಕಟ್ಟೆಯವರೆಗೆ ಕೇಳಿದ್ದೀರಿ, ಇದನ್ನು ಮುಗಿಸುತ್ತೇವೆ. ಇವರು ರಸ್ತೆಗಳೆಲ್ಲವೂ ಹಾಳಾಗಿದೆ ಅದನ್ನು ಮಾಡಬೇಕೆಂದು ಕೇಳಿದ್ದಾರೆ. ರಸ್ತೆಗಳೆಲ್ಲವನ್ನು ರಿಪೇರಿ ಮಾಡಿ ಅದನ್ನು ಸುಸ್ಥಿತಿಯಲ್ಲಿಡುವಂತಹ ಕೆಲಸವನ್ನು ಮಾಡಿಕೊಡುತ್ತವೆ. ಅಲ್ಲಿ accident ಗಳು ಆಗುತ್ತದೆ, ಅಲ್ಲಿ accident ಗಳು ಆಗಿದ್ದರೂ ಸಹ ಯಾರು

ಸತ್ತಿರುವುದಿಲ್ಲ. ಅಲ್ಲಿ accident ಗಳು ಆಗಿರುವುದು ನಿಜ. ರಸ್ತೆಯೆಲ್ಲವನ್ನು ಸುಸ್ಥಿತಿಯಲ್ಲಿ ಸರಿಯಾಗಿಟ್ಟಿಲ್ಲವೆಂದು ಹೇಳುತ್ತಿರುವುದು ನಿಜ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ.....

ಅಧ್ಯಕ್ಷರು : ಮಾನ್ಯ ಚಲುವರಾಯಸ್ವಾಮಿಯವರೆ, ಮಾನ್ಯ ಮುಖ್ಯಮಂತ್ರಿಯವರು ಉತ್ತರ ಹೇಳುತ್ತಿದ್ದಾರೆ

ಶ್ರೀ ಸಿದ್ದರಾಮಯ್ಯ : ಮಾನ್ಯ ಚಲುವರಾಯಸ್ವಾಮಿಯವರು ಉತ್ತರ ಹೇಳುವುದಕ್ಕೆ ಬಿಡುತ್ತಿಲ್ಲ ನೀವು ಮಂತ್ರಿಯಾಗಿದ್ದವರು ಹೇಗಪ್ಪಾ?

ಶ್ರೀ ಎನ್.ಚಲುವರಾಯಸ್ವಾಮಿ : ಈ ಬಗ್ಗೆ ತಾವು ಬಹಳ, serious ಆಗಿ ಹೇಳಬೇಕಾಗುತ್ತದೆ ಬೇರೆ ದೇಶದಲ್ಲಿ ಆಗಿರುವಂತಹ ಕೆಲಸವನ್ನು ನೋಡಿ,

ಶ್ರೀ ಸಿದ್ದರಾಮಯ್ಯ : ಅಧಿಕಾರಿಗಳಿಗೆ ಬಹಳ ಕಟ್ಟುನಿಟ್ಟಾಗಿ ಬಹಳ ಸೀರಿಯಸ್ಸಾಗಿ ಹೇಳುತ್ತೇವೆ. ಈ ಕಡೆಗೆ ಹೆಚ್ಚು ಗಮನ ಕೊಡುತ್ತೇವೆ. ಶ್ರೀ ವಿಜಯಕುಮಾರ್‌ರವರೆ, ನಿಮ್ಮನ್ನು ಸಹ ಜೊತೆಯಲ್ಲಿ ಕರೆದುಕೊಂಡು ಹೋಗಿ ತೋರಿಸುತ್ತೇವೆ. ನೀವು ಏನೇನು ಮಾಡಬೇಕೆಂದು ಹೇಳುತ್ತೀರೋ ಅವೆಲ್ಲವನ್ನು ಮಾಡೋಣ, ಆಗಬಹುದೇ?

ಅಧ್ಯಕ್ಷರು : O.K.

ಶ್ರೀ ಬಿ.ಎನ್.ವಿಜಯಕುಮಾರ್: ಇದರೊಳಗಡೆ ಮತ್ತು ಬಿಬಿಎಂಪಿ 50% ಕೆಲಸವನ್ನು ಮಾಡುವುದು 50% ಕೆಲಸವನ್ನು ಮೆಟ್ರೋದವರು ಮಾಡುವುದು ಎಂದು ಇದೆ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಯವರು ನಿಮ್ಮನ್ನು ಕರೆದುಕೊಂಡು ಹೋಗಿ ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲಾ?

ಶ್ರೀ ಸಿದ್ದರಾಮಯ್ಯ : ಏನೇನು ಕೆಲಸಗಳನ್ನು ಮಾಡಬೇಕೋ ಅವೆಲ್ಲವನ್ನು ಮಾಡೋಣ.

ಅಧ್ಯಕ್ಷರು : O.K. ಮಾನ್ಯ ವೆಂಕಟೇಶ್‌ರವರೆ ತಾವು ಪ್ರಶ್ನೆಯನ್ನು ಕೇಳಿ.

ಅಗ್ನಿಶಾಮಕ ಠಾಣೆ

36(652) ಶ್ರೀ ವೆಂಕಟೇಶ್.ಕೆ. (ಪಿರಿಯಾಪಟ್ಟಣ)

ಅ) ಪಿರಿಯಾಪಟ್ಟಣ ತಾಲ್ಲೂಕು, ಬೆಟ್ಟದಪುರ ಗ್ರಾಮಕ್ಕೆ ಅಗ್ನಿಶಾಮಕ ಠಾಣೆ ಮಂಜೂರು ಮಾಡುವ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಬೆಟ್ಟದಪುರದಲ್ಲಿ ತುರ್ತಾಗಿ ಅಗ್ನಿಶಾಮಕ ಠಾಣೆ ಮಂಜೂರು ಮಾಡಲಾಗುವುದೇ?

ಶ್ರೀ ಕೆ.ಜೆ.ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಹೌದು

ಆ) ಕರ್ನಾಟಕ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ವಿಶೇಷ ಅಭಿವೃದ್ಧಿ ಯೋಜನೆಯ ಕೆ–ಸೆಫ್–2010ರಡಿಯಲ್ಲಿ ರಾಜ್ಯದ ಎಲ್ಲಾ 176 ತಾಲ್ಲೂಕು ಕೇಂದ್ರಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ 156 ತಾಲ್ಲೂಕುಗಳಲ್ಲಿ 186 ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸುತ್ತಿದ್ದು, ಸರ್ಕಾರದಿಂದ ಮಂಜೂರಾಗಿ ಪ್ರಾರಂಭವಾಗದೇ ಇರುವ 26 ಅಗ್ನಿಶಾಮಕ ಠಾಣೆಗಳನ್ನು ಉಳಿದ 20 ತಾಲ್ಲೂಕುಗಳಲ್ಲಿ ಪ್ರಾರಂಭಿಸಬೇಕಾಗಿದೆ. ಈ ದಿಸೆಯಲ್ಲಿ ಮಂಜೂರಾದ ಎಲ್ಲಾ ಅಗ್ನಿಶಾಮಕ ಠಾಣೆಗಳನ್ನು ತರೆದ ನಂತರ ಬೆಟ್ಟದ ಪುರದಲ್ಲಿನ ಕೈಗಾರಿಕಾ ಬೆಳವಣಿಗೆ ಹಾಗೂ ಅಗ್ನಿ ಅನಾಹುತಗಳನ್ನು ಪರಿಶೀಲಿಸಿ,